O.S.No.:122/2016
P.W.:2

ಈ ದಿನ ದಿಃ11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮದ್ಯಂತರ ಅರ್ಜಿ ಆದೇಶ ದಿನಾಂಕ.27.11.2025ರ ಆಧಾರದ ಮೇಲೆ ವಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸಿಸಿ ರವರಿಂದಃ-**

1. ನನಗೆ 47ವರ್ಷ ವಯಸ್ಸು. ನನಗೆ ಇಬ್ಬರು ಮಕ್ಕಳು. ನನ್ನ ಮಗನಿಗೆ ಈಗ 21ವರ್ಷ ವಯಸ್ಸು ಮತ್ತು ನನ್ನ ಮಗಳಿಗೆ 8ವರ್ಷ ವಯಸ್ಸು ಇರುತ್ತದೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಂದೆಯ ಮೊದಲನೇ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಮೊದಲನೇ ಹೆಂಡತಿಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ತಾಯಿಯ ಹೆಸರು ಕೆಂಪಮ್ಮ. ನನ್ನ ತಂದೆಯ ಮೊದಲನೇ ಹೆಂಡತಿಯ ಹೆಸರು ಹುಚ್ಚಿ ಎಂದರೆ ಸರಿಯಲ್ಲ.

2. ಸರ್ವೆ ನಂ.18ರಲ್ಲಿ 2ಎಕರೆ ಜಮೀನು ಭೈರಾ ಎನ್ನುವವರಿಗೆ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ಭೈರಾ ರವರು ಮರಣ ಹೊಂದಿದ ನಂತರ ಸದರಿ ಜಮೀನಿನ ಖಾತೆಯು ಅವರ ಹೆಂಡತಿಯಾದ ಹುಚ್ಚಿ ರವರ ಹೆಸರಿಗೆ ಬದಲಾವಣೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಜೋಗಿ ಎಂಬ ವ್ಯಕ್ತಿಗೂ ನಮ್ಮ ತಂದೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಜೋಗಿ ರವರ ಹೆಂಡತಿ ಕೆಂಪಿ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.18ರಲ್ಲಿ 2ಎಕರೆ ಜಮೀನು ಜೋಗಿ

ಎನ್ನುವವರಿಗೆ ಮಂಜೂರು ಆಗಿತ್ತು ಎಂದರೆ ಸಾಕ್ಷಿಯು ಆಗಿರಬಹುದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜೋಗಿ ರವರು ತಮಗೆ ಸರ್ವೆ ನಂ.18ರಲ್ಲಿ ಮಂಜೂರಾದ 2ಎಕರೆ ಜಮೀನನ್ನು ಬೋರಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದೇ ಪ್ರಕಾರ ಬೈರಾ ಎನ್ನುವವರು ಸಹ ತಮಗೆ ಸರ್ವೆ ನಂ.18ರಲ್ಲಿ ಮಂಜೂರಾದ 2ಎಕರೆ ಜಮೀನನ್ನು ಬೋರಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ನಾನು ದಾವಾಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನೋಡಿಲ್ಲ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸರ್ವೆ ನಂ.131ರ ಜಮೀನು ಹುರುಪಯ್ಯ ಎನ್ನುವವರಿಗೆ ದುರಸ್ತಿಯಾಗಿರುತ್ತದೆ. ನನಗೆ ಓದಲು ಬರೆಯಲು ಬರುವುದಿಲ್ಲ. ಹುರುಪಯ್ಯನ ಹೆಸರಿಗೆ ದುರಸ್ತಿಯಾದ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ. ಸರ್ವೆ ನಂ.18ರ ಜಮೀನು ದುರಸ್ತು ಮತ್ತು ಪೋಡಿಯಾಗಿ ಸರ್ವೆ ನಂ.131 ಆಗಿರುತ್ತದೆ ಎಂದು ನೀವು ನಿಮ್ಮ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಯಾವುದೇ ದಾಖಲೆಗಳನ್ನು ನೋಡದೆ ಬರಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇದೆ ಹಾಗಾಗಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹುರುಪಯ್ಯ ರವರ ಹೆಸರಿಗೆ ಇದ್ದ ಪಹಣಿ ಮತ್ತು ಇಸಿ ಯನ್ನು ನೋಡಿರುತ್ತೇನೆ. ಇಸಿಯನ್ನು ನಾನೇ ತೆಗೆದುಕೊಂಡು ನೋಡಿರುತ್ತೇನೆ. ಸದರಿ

ಇಸಿಯನ್ನು ಈ ದಾವೆಯಲ್ಲಿ ನನಗೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

4. ಇಸಿಯಲ್ಲಿ ಯಾರಿಂದ ಯಾರಿಗೆ ಯಾವಾಗ ಕ್ರಯ ಆಗಿರುತ್ತದೆ ಎಂಬ ಬಗ್ಗೆ ಬರೆದಿತ್ತಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ, ಕೇವಲ ಹುರುಪಯ್ಯ ರವರ ಹೆಸರು ಇದ್ದ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. ನೀವು ಭೈರಾ ಮತ್ತು ಜೋಗಿ ರವರ ಕುಟುಂಬಕ್ಕೆ ಸಂಬಂಧಿಸಿದವರಾ ಎಂದರೆ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ.

5. ಹುರುಪಯ್ಯನ ಪರವಾಗಿ ಸಾಕ್ಷ್ಯ ನುಡಿಯಲು ನಾನೇ ಬಂದಿರುತ್ತೇನೆ. ಹುರುಪಯ್ಯ ರವರು ಈಗ ಮರಣ ಹೊಂದಿರುತ್ತಾರೆ. ಹುರುಪಯ್ಯ ರವರು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಹುರುಪಯ್ಯನಿಗೆ ಆರು ಜನ ಮಕ್ಕಳು. ಹುರುಪಯ್ಯನಿಗೆ ಇಬ್ಬರು ಹೆಂಡತಿಯರು. ಹುರುಪಯ್ಯನ ಮೊದಲನೇ ಹೆಂಡತಿ ಹೆಸರು ನನಗೆ ಗೊತ್ತಿಲ್ಲ, ಆತನ ಮೊದಲನೇ ಹೆಂಡತಿಗೆ ಒಬ್ಬ ಮಗನಿದ್ದು, ಆತನ ಹೆಸರು ಮಹದೇವಯ್ಯ ಎಂದು ಇರುತ್ತಾರೆ. ಹುರುಪಯ್ಯನ ಎರಡನೇ ಹೆಂಡತಿಗೆ ಐದು ಜನ ಮಕ್ಕಳಿದ್ದು, ಅವರುಗಳೆಂದರೆ ಧ್ಯಾವಣ್ಣ, ಶಿವಣ್ಣ, ಮಹಾದೇವರು, ದೇವಮ್ಮ ಮತ್ತು ಶಿವರಾಜು ಎಂದು ಇರುತ್ತಾರೆ. ಹುರುಪಯ್ಯನ ಎಲ್ಲ ಮಕ್ಕಳು ಒಂದೇ ಊರಿನಲ್ಲಿ ವಾಸವಿದ್ದರಾ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೊದಲನೇ ಮಗ ಮಾತ್ರ ಬೇರೆ ಊರಿನಲ್ಲಿ ವಾಸವಿದ್ದಾರೆ, ಉಳಿದವರು ಚಿಕ್ಕೇನದೊಡ್ಡಿ ಗ್ರಾಮದಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ಚಿಕ್ಕೇನದೊಡ್ಡಿ ಮತ್ತು ಬೆಣಚುಕಲ್‌ದೊಡ್ಡಿಗೂ ಒಂದುವರೆ ಮೈಲಿ ಅಂತರ ಇರುತ್ತದೆ. ಕೋನಸಂದ್ರ ಗ್ರಾಮದಲ್ಲಿ ಅಲ್ಲಿಂದ ಒಂದುವರೆ ಮೈಲಿ ಆಗುತ್ತದೆ.

6. ವಾದಿಗಳ ಕುಟುಂಬದ ಬಗ್ಗೆ ಮತ್ತು ದಾವಾಸ್ವತ್ತಿನ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಹುರುಪಯ್ಯನ ಇಬ್ಬರು ಮಕ್ಕಳು ಈ ದಾವೆಯನ್ನು ಹೂಡಿರುತ್ತಾರೆ. ಹುರುಪಯ್ಯನ ಉಳಿದ ಮಕ್ಕಳು ಈ ದಾವೆಯಲ್ಲಿ ಪಾರ್ಟಿಗಳು ಅಲ್ಲ ಎಂದರೆ ಸಾಕ್ಷಿಯು ಅವರ ಪೈಕಿ ಇಬ್ಬರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಮರಣ ಹೊಂದಿದ ವ್ಯಕ್ತಿಗಳ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಹುರುಪಯ್ಯನಿಗೆ ಸಂಬಂಧಿಸಿದೆ ಇರುವ ಕಾರಣಕ್ಕೆ ಆತನ ಎಲ್ಲ ಮಕ್ಕಳು ಈ ದಾವೆಯನ್ನು ಹೂಡಿಲ್ಲ ಎಂದರೆ ಸಾಕ್ಷಿಯು ದಾವಾಸ್ವತ್ತು ವಾದಿಗಳಿಗೆ ಬಂದಿರುತ್ತದೆ, ಹಾಗಾಗಿ ಅವರೆ ಅದನ್ನು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳಿಗೆ ದಾವಾಸ್ವತ್ತು ಯಾವ ಮೂಲಕ ಬಂದಿರುತ್ತದೆ ಎಂದು ಅದರ ಬಗ್ಗೆ ಬರವಣಿಗೆ ಏನಾದರೂ ಆಗಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬರವಣಿಗೆ ಆಗಿಲ್ಲ, ವಾದಿಗಳೆ ಅವರಿಗೆ ಬಂದಿರುತ್ತದೆ ಎಂದು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

7. ಈ ದಾವೆ ಚಾಲ್ತಿಯಲ್ಲಿರುವಾಗಲೇ ಪ್ರತಿವಾದಿಗಳಿಗೆ ತಿಳಿಯದಂತೆ 1ನೇ ವಾದಿ ಮತ್ತು ಇತರರು ದಾವಾಸ್ವತ್ತನ್ನು ಬೇರೆಯವರಿಗೆ ಅಗ್ರಿಮೆಂಟ್ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹುರುಪಯ್ಯ ರವರ ಮೊದಲನೇ ಹೆಂಡತಿಯ ಮಗನಾದ ಮಹದೇವ, 2ನೇ ಹೆಂಡತಿಯ ಮಕ್ಕಳಾದ ಶಿವರಾಜು, ಹೊನ್ನಮ್ಮ ಮತ್ತು ಇನ್ನೋಬ್ಬ ಶಿವರಾಜು ಎನ್ನುವವರು ಸೇರಿಕೊಂಡು ಅಗ್ರಿಮೆಂಟ್ ನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ದಾವಾಸ್ವತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಹಳೆ ಸರ್ವೆ ನಂ.18 ಹೊಸ ಸರ್ವೆ ನಂ.130ರ ಜಮೀನು ವಾದಿಗಳಿಗೆ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ.130ರಲ್ಲಿದ್ದ ತಮ್ಮ ಜಮೀನನ್ನು ವಾದಿಗಳ ಕುಟುಂಬದವರು ದಿನಾಂಕ.10.04.1974, 25.04.1974 ಮತ್ತು 20.07.1976ರ ಖರೀದಿ ಪತ್ರಗಳಂತೆ ಈಗಾಗಲೇ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಳೆ ಸರ್ವೆ ನಂ.18 ಹೊಸ ಸರ್ವೆ ನಂ.130ಕ್ಕೆ ಸಂಬಂಧಿಸಿದ ಖರ್ದ ದಾಖಲೆಯನ್ನು ನಾನು ನೋಡಿಲ್ಲ. ಹಳೆ ಸರ್ವೆ ನಂ.18 ಹೊಸ ಸರ್ವೆ ನಂ.131ಕ್ಕೆ ಸಂಬಂಧಿಸಿದ ಖರ್ದ ದಾಖಲೆಯನ್ನು ನಾನು ನೋಡಿಲ್ಲ ಆದರೆ ಓದಿ ತಿಳಿದುಕೊಂಡಿರುತ್ತೇನೆ. ಸರ್ವೆ ನಂ.131ರ ಜಮೀನಿನ ಖರ್ದ ಜೋಗಿ ರವರ ಹೆಸರಿನಲ್ಲಿರುತ್ತದೆ.

9. ನನಗೆ ಸಾಕ್ಷ್ಯ ನುಡಿಯಲು ಹುರುಪಯ್ಯನ ಮಕ್ಕಳು ಕರೆದಿರುತ್ತಾರೆ. ಅವರ ಊರಿನಲ್ಲಿ ಅವರಿಗೆ ಸಂಬಂಧಿಸಿದವರು ಸಾಕ್ಷ್ಯ ನುಡಿಯಲು ಯಾರು ಇರಲಿಲ್ವ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರ ಊರಿನವರು ಇಬ್ಬರ ಪರವಾಗಿಯು ಹೇಳಲು ಆಗುವುದಿಲ್ಲವೆಂದು ಯಾರು ಬಂದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.130 ಅಥವಾ ಸರ್ವೆ ನಂ.131ರ ಜಮೀನಿನ ಅಕ್ಕಪಕ್ಕ ನನಗೆ ಸಂಬಂಧಿಸಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.131ರ ಜಮೀನನ್ನು ನಾನು ನೋಡಿರುತ್ತೇನೆ. ಸರ್ವೆ ನಂ.131ರ ಜಮೀನಿನ ಪೂರ್ವಕ್ಕೆ ಗುಂಡಯ್ಯ ರವರ ಜಮೀನು, ಪಶ್ಚಿಮಕ್ಕೆ ಗುಂಡಣ್ಣ ರವರ ಜಮೀನು, ಉತ್ತರಕ್ಕೆ ಕೆಂಪಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ಚಿಕ್ಕಮರಿಯಪ್ಪ ರವರ ಜಮೀನು ಬರುತ್ತದೆ. ಈ ಮೇಲೆ ಹೇಳಿದ ಚಕ್ಕುಬಂದಿಯ ಅಜುಬಾಜುದಾರರಿಗೂ ದಾವಾಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಾನು ಯಾವತ್ತು ನೋಡಿಯೇ ಇಲ್ಲ, ದಾವಾಸ್ವತ್ತು ನಮ್ಮ ವಾಸದ ಸ್ಥಳದಿಂದ ಬಹಳಷ್ಟು ದೂರದಲ್ಲಿರುವ ಕಾರಣಕ್ಕೆ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಯಾವ ಜಾತಿಯ ಮರಗಳು ಇವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಮರಗಳು ಇಲ್ಲ, ಒಂದು ಬೇವಿನ ಮರವಿದೆ, ಅಂಟುವಾಣಿ ಬೆಳೆಗಳು ಮತ್ತು ಕಾಂಗ್ರೇಸ್ ಗಿಡಗಳು ಹುರುಳಿ ಬೆಳೆಯ ಸುತ್ತ ಎಂದು ನುಡಿಯುತ್ತಾರೆ.

10. ವಾದಿಗಳು ನನಗೆ ಗೊತ್ತಿರುವ ಸಂಗತಿಗಳ ಬಗ್ಗೆ ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ನನಗೆ ದಾವಾಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ವಾದಿಗಳಿಗೆ ಸಹಾಯ ಮಾಡಲು ಅವರು ಹೇಳಿದಂತೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**